ಓ ಎಸ್ 83/2017 ಪಿ.ಡಬ್ಲ್ಯೂ: 1

ದಿನಾಂಕಃ 10/7/2019

ಇಂದು ದಿಃ10/7/2019 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಪರ ಶ್ರೀ ಎಂ ಬಿ ಆರ್ ವಕೀಲರಿಂದಃ

ನನ್ನ ತಂದೆ ಮಹಣೇಗೌಡರು ಯಾವಾಗ ತೀರಿಕೊಂಡಿದ್ದು ಎಂದು ಹೇಳಲು ಗೊತ್ತಿಲ್ಲ. ನನ್ನ ತಂದೆ ತೀರಿಕೊಂಡು ಸುಮಾರು 12 ವರ್ಷ ಆಗಿರಬಹುದು. ಆದರೆ ನಿಖರ ದಿನಾಂಕ ಹೇಳಲು ಗೊತ್ತಿಲ್ಲ. ಆ ಕುರಿತು ದಾಖಲಾತಿ ಹಾಜರುಪಡಿಸಲು ತೊಂದರೆ ಇದೆಯೇ ಎಂದು ಕೇಳಿದರೆ ದಾಖಲೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತೇನೆ. ದಾವಾ ಆಸ್ತಿಗಳು ಒಟ್ಟುಕುಟುಂಬದ ಆಸ್ತಿಗಳು ಎಂದು ಸುಳ್ಳು ಪ್ರತಿಪಾದನೆ ಮಾಡಿರುವುದು ಎಂದರೆ ಸರಿಯಲ್ಲ. ದಾವಾ ಐಟಂ ನಂ. 1 ರಲ್ಲಿ ಕಾಣಿಸಿರುವ ಹಲವಾರು ಸರ್ವೆ ನಂಬರ್ ಗಳ ಪೈಕಿ ಸರ್ವೆ ನಂ.315/1ಬಿ2 ರಲ್ಲಿ 14 ವರೆ ಗುಂಟೆ , ಸರ್ವೆ ನಂ.316/1ಬಿ2 ರಲ್ಲಿ 14 ಗುಂಟೆ ಇವೆರಡು 2ನೇ ಪ್ರತಿವಾದಿ ರಾಮೇಗೌಡರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಐಟಂ ನಂ.3 ಅಂದರೆ ಸರ್ವೆ ನಂ.281/3 ರಲ್ಲಿ 1 ಎಕರೆ ಹಾಗು ದಾವಾ ಐಟಂ ನಂ.5 ಅಂದರೆ ಕೆಂಪಸಿದ್ದನಹುಂಡಿ ಪಂಚಾಯ್ತಿ ವ್ಯಾಪ್ತಿಯಲ್ಲಿರುವ ನಿವೇಶನ ಹಾಗು ಮನೆ ಇವು 5ನೇ ಪ್ರತಿವಾದಿಯ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ದಾವಾ ಐಟಂ ನಂ.6 ಅಂದರೆ ಸರ್ವೆ ನಂ.314/1ಬಿ 1 ರಲ್ಲಿ 14 ವರೆ ಗುಂಟೆ ಹಾಗು ದಾವಾ ಐಟಂ ನಂ.7 ಅಂದರೆ ಸರ್ವೆ ನಂ.314/1ಬಿ 2 ರಲ್ಲಿ 14 ವರೆ ಗುಂಟೆ ಇವೆರಡೂ ಕೂಡ 1ನೇ ಪ್ರತಿವಾದಿಯ ಸ್ವಂತ ಸ್ವತ್ತುಗಳು ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ಅಂದರೆ ಸರ್ವೆ ನಂ.280/3 ರಲ್ಲಿ 8 ಗುಂಟೆ 2ನೇ ಪ್ರತಿವಾದಿಯ ಸ್ವತ್ತು ಎಂದರೆ ಸರಿಯಲ್ಲ. ನಾನು ಹೇಳುವಂತತೆ ಯಾವುದೇ ಒಟ್ಟುಕುಟುಂಬದ ಸ್ವತ್ತು ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು

ಸಾಕ್ಷಿ ಹೇಳುತ್ತಿರುವುದು ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ಕೇಸು ದಾಖಲಿಸಿರುವುದು ಎಂದರೆ ಸರಿಯಲ್ಲ.

ಅದೇ ಪಾಟೀ ಸವಾಲನ್ನು ಪ್ರತಿವಾದಿ 1 ಮತ್ತು 5 ರವರುಕೂಡ ಅಳವಡಿಸಿಕೊಂಡಿರುತ್ತಾರೆ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.